ಕಾರ್ಮಿಕ ನ್ಯಾಯಾಲಯದಲ್ಲಿರುವ ಮೊಕದ್ದಮೆಗಳು

2037 - ಶ್ರೀ ಯು. ಆರ್. ಸಭಾಪತಿ (ಉಡುಪಿ) : ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. *ರಾಜ್ಯದ ಕಾರ್ಮಿಕ ನ್ಯಾಯಾಲಯದಲ್ಲಿ ಇತ್ಯರ್ಥವಾಗದೇ ಬಾಕಿ ಇರುವ ಮೊಕದ್ದಮೆಗಳು ಎಷ್ಟು?*
2. *ಮೊಕದ್ದಮೆಗಳನ್ನು ವಿಲೇವಾರಿ ಮಾಡುವಲ್ಲಿ ವಿಳಂಬವಾಗಲು ಕಾರಣಗಳೇನು? (ವಿವರ ನೀಡುವುದು)*

ಶ್ರೀ ಬಿ. ಸತ್ಯನಾರಾಯಣ (ಕಾರ್ಮಿಕ ಸಚಿವರು) :

1. ರಾಜ್ಯದ ವಿವಿಧ ಕಾರ್ಮಿಕ ನ್ಯಾಯಾಲಯ ಹಾಗೂ ಔದ್ಯಮಿಕ ನ್ಯಾಯಾಧಿಕರಣಗಳಲ್ಲಿ ಜೂನ್ 1997ರ ಅಂತ್ಯಕ್ಕೆ 16492 ಪ್ರಕರಣಗಳು ಬಾಕಿ ಇರುತ್ತದೆ. (ಜಿಲ್ಲಾವಾರು ಮಾಹಿತಿ ಲಗತ್ತಿಸಿದೆ)

2. ನ್ಯಾಯಾಲಯಗಳಲ್ಲಿ ಮೊಕದ್ದಮೆಗಳನ್ನು ವಿಲೇವಾರಿ ಮಾಡಲು ಈಗ ಅನುಸರಿಸುತ್ತಿರುವ ವಿಧಾನದಿಂದ ವಿಲೇವಾರಿಯಲ್ಲಿ ತಡವಾಗುವುದನ್ನು ತಪ್ಪಿಸಲು ಸಾಧ್ಯವಾಗುತ್ತಿರುವುದಿಲ್ಲ. ಆದರೂ ಸಹ ಕೆಲವು ಮುಖ್ಯ ಕಾರಣಗಳು ಈ ಕೆಳಗಿನಂತಿದೆ.

ಅ) ನ್ಯಾಯಾಧೀಶರ ಹುದ್ದೆಗಳು ಖಾಲಿ ಇದೆ.

ಆ) ಕಕ್ಷಿದಾರರು ಸಕಾಲದಲ್ಲಿ ನ್ಯಾಯಾಲಯಗಳಲ್ಲಿ ಹಾಜರಾಗದೇ ಇರುವುದರಿಂದ ಮತ್ತು

ಇ) ವಕೀಲರು ಸಕಾಲದಲ್ಲಿ ನ್ಯಾಯಾಲಯಗಳಲ್ಲಿ ಹಾಜರಾಗದೇ ಇರುವುದು.

No. KAE 1613 KAITHI 97

DISTRICT WISE PENDENCY OF CASES IN DIFFERENT LABOUR TRIBUNALS AS AT THE END OF JUNE 1997

Bangalore	7106
Kolar	621
Tumkur	107
Belgaum	825
Bijapur	691
Bidar	100
Gulbarga	202

Raichur	166
Bellary	584
Dharwad	1377
N. Kanara	288
Chitradurga	420
Shimoga	320
S. Kanara	1009
Hassan	343
Chickmagalur	175
Mandya	483
Mysore	1544
Kodagu	131
Total	**16,492**

ನಿವೃತ್ತಿ ವೇತನವನ್ನು ತಡವಾಗಿ ನೀಡಿದ್ದಕ್ಕೆ ಬಡ್ಡಿ ಕೊಡುವುದು

2038- ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಲೋಕೋಪಯೋಗಿ ಇಲಾಖೆಯಲ್ಲಿ ನಿವೃತ್ತಿ ವೇತನ ಮತ್ತಿತರ ನಿವೃತ್ತಿ ಸೌಲಭ್ಯಗಳನ್ನು ತುಂಬಾ ತಡವಾಗಿ ಪಾವತಿ ಮಾಡಿರುವ ಪ್ರಕರಣಗಳಲ್ಲಿ ಸಂಬಂಧಿಸಿದ ನಿವೃತ್ತಿಯಾದ ನೌಕರರು, ಅಧಿಕಾರಿಗಳು, ಸರ್ಕಾರಿ ಆದೇಶದಂತೆ ವಿಳಂಬವಾಗಿ ನೀಡಿದ ಪಾವತಿಗೆ ಬಡ್ಡಿಯನ್ನು ಕೋರಿರುವ ಎಷ್ಟು ಪ್ರಸ್ತಾವನೆಗಳು ಇಲಾಖೆಯ ಮುಂದಿದೆ (ಹೆಸರು ಸಮೇತ ವಿವರ ನೀಡುವುದು)*

ಆ) *ಇಂತಹ ಸಹಾನುಭೂತಿಯ ನ್ಯಾಯಯುತ ಪ್ರಕರಣಗಳನ್ನು ವಿನಾಕಾರಣ ವಿಳಂಬಿಸದೆ ಕೂಡಲೇ ನಿರ್ದಿಷ್ಟ ಕ್ರಮಗಳನ್ನು ಕೈಗೊಳ್ಳಬೇಕಾಗಿರುವುದು ಸಮಂಜಸವಲ್ಲವೆ.*

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) 12 (ವಿವರಗಳನ್ನು ಅನುಬಂಧ -1 ರಲ್ಲಿ ಲಗತ್ತಿಸಿದೆ).

ಆ) ಹೌದು.